ಅಧ್ಯಕ್ಷರು.—ನಿಮಗೆ ಗಮನ ಸೆಳೆಯುವ ಸೂಚನೆಯ ಮೇಲೆ ಉತ್ತರ ಕೊಡಿಸಿದ್ದೇನೆ. ಆದ ಕ್ಕಾಗಿ ಇದನ್ನು ನಾನು ಅಲೋ ಮಾಡಿಲ್ಲ.

ಶ್ರೀ ಬಿ. ಲಕ್ಕಪ್ಪ.—ಗಮನ ಸೆಳೆಯುವ ಸೂಚನೆ ಮೇರೆಗೆ ಕೊಟ್ಟಂತಹ ಉತ್ತರ ಬೇರೆ. ಆದರೆ ಖಿಖಿಳರ ಕೆಳಗೆ ಹೇಳುವಂತಹ ವಿಷಯವೇ ಬೇರೆ.

ಅಧ್ಯಕ್ಷರು.—ಅದಕ್ಕೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅದು ಬಹಳ ಮುಖ್ಯವಾದ ವಿಷಯವಾದುದರಿಂದ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯಲ್ಲಿ ಹೇಳಿದ ವಿಚಾರ ವೇ ಬೇರೆ. ಖಿಖಿಳರ ಕೆಳಗೆ ಹೇಳುವಂತಹ ವಿಷಯವೇ ಬೇರೆ ಎನ್ನುತ್ತಿದ್ದಾರೆ. ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಆಯಿತು. ಓದಿ.

XXVIII. ರಾಜ್ಯದ ಬುಡಕಟ್ಟು ಗುಂಪಿಗೆ ಸೇರಿದ ಜನಾಂಗಕ್ಕೆ ಜನಸಂಖ್ಯೆಗನು ಗುಣವಾಗಿ ವಿಶಾಸಲಾತಿಯನ್ನು ಹೆಚ್ಚಿಸುವುದು.

ಶ್ರೀ ಲಕ್ಕಪ್ಪ.—ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಕೆಲವು ಜನಾಂಗಗಳಾದ ನಾಯಕ, ನಾಯಕ್, ಬೇಡ ವಾಲ್ಮೀಕಿ, ತರವಾರ ಪರಿವಾರ ಮತ್ತು ಕುರುಬ, ಮಲೇರು ಹಾಗೂ ದರ್ವೇಶಿ ಕೋಮುಗಳು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಬಹಳ ಹಿಂದೆ ಬಿದ್ದಿರುವುದನ್ನು ಪರಿಗಣಿಸಿ ಶೇ ೧೦ ರಂತೆ ವಿಶಾಸಲಾತಿ ಮತ್ತು ಇತರ ಸೌಲಭ್ಯಗಳನ್ನು ಪಡೆಯುತ್ತಿದ್ದ ಬಿ.ಸಿ.ಟಿ. ಗ್ರೂಪಿನಿಂದ ಮೇಲ್ಕಂಡ ಜಾತಿಯನ್ನು ತೆಗೆದು ಭಾರತ ಸಂವಿಧಾನದ ಖಿಳಿಏ ರ ವಿಧಿ ಅನುಸರಿಸಿ ಈ ಕೋಮುಗಳನ್ನು ಬುಡಕಟ್ಟು ಜನಾಂಗದ ಗುಂಪಿಗೆ ಸೇರಿಸಿ ಶೈಕ್ಷಣಿಕವಾಗಿ ಹೆಚ್ಚಿನ ವಿಶಾಸಲಾತಿ ದೊರಕಿಸಿ ಮತ್ತು ಇತರ ಶೈಕ್ಷಣಿಕ ಸೌಲಭ್ಯಗಳನ್ನು ಕೊಡಬೇಕೆಂದು ಸದುದ್ದೇಶದಿಂದ ಈ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಶ್ಲಾಘಿಸುತ್ತೇನೆ.

ಆದರೆ ಶೇ ೧೦ರಂತೆ ವಿಶಾಸಲಾತಿ ಮತ್ತು ಇತರೆ ಸೌಲಭ್ಯಗಳಿದ್ದ ಗ್ರೂಪಿನಿಂದ ಬೇರ್ಪಡಿಸಿ ಹಿಂದೆ ವಲಯ ನಿರ್ಬಂಧದ ಆಧಾರದ ಮೇಲೆ ಪರಿಗಣಿಸಿ ಆಗ್ಗೆ ಕಡಿಮೆ ಪರ್ಸೆಂಟ್ ಜನರಿಗೆ ವಿಗದಿ ಪಡಿಸಿದ್ದ ಶೇಕಡ ಖಿರಂತೆ ವಿಶಾಸಲಾತಿಯನ್ನು ಹೊಂದಿ ಗುಂಪಿನೊಡನೆ ರಾಜ್ಯದಲ್ಲಿನ ೪೦ ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ಕುರುಬರು ಅಲ್ಲದೆ ಇತರೆ ಮೇಲೆ ಹೇಳಿದ ಜಾತಿಗಳನ್ನು ಸೇರಿಸುವಾಗ ಸೇರ್ಪಡೆಯಾದ ಜನಾಂಗದ ಜನ ಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ವಿಶಾಸಲಾತಿ ಮತ್ತು ಇತರೆ ಸೌಲಭ್ಯಗಳ ಶೇಕಡವಾರು ಪ್ರಮಾಣವನ್ನು ಹೆಚ್ಚಿಸದೆ ಇರುವುದರಿಂದ ಈಗ ಈ ವರ್ಷದ ವೈದ್ಯಕೀಯ ಮತ್ತು ತಾಂತ್ರಿಕ ವಿದ್ಯಾಭ್ಯಾಸ ಬಯಸುವ ಈ ಕೋಮಿನ ವಿದ್ಯಾರ್ಥಿಗಳಿಗೆ ಬಿ.ಸಿ.ಟಿ.ಯಲ್ಲಿ ದೊರೆಯುತ್ತಿದಷ್ಟು ವಿಶಾಸಲಾತಿ ಸೌಲಭ್ಯಗಳು ಸಹ ದೊರೆಯದಂತಾಗಿದೆ. ಇದರಿಂದ ಸರ್ಕಾರದ ಮೂಲೋದ್ದೇಶಕ್ಕೆ ಭಂಗವಾಗುವುದಲ್ಲದೆ ಬಿ. ಸಿ. ಟಿ. ಯಿಂದ ಎಸ್. ಟಿ.ಗೆ ಸೇರ್ಪಡೆಯಾದವರಿಗೆ ಅನ್ಯಾಯವಾಗುವುದಲ್ಲದೆ ಕೇವಲ ಶೇ ಖಿ ರಂತೆ ವಿಶಾಸಲಾತಿ ಮತ್ತು ಇತರ ಸೌಲಭ್ಯಗಳನ್ನು ಪಡೆಯುತ್ತಿದ್ದ ಬುಡಕಟ್ಟು ಜನಾಂಗದವರಿಗೂ ಸಹ ಅನ್ಯಾಯವಾಗುತ್ತದೆ. ಆದ್ದರಿಂದ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೨೫ ರಷ್ಟು ಜನಸಂಖ್ಯೆ ಹೊಂದಿರತಕ್ಕಂತಹ ಬುಡಕಟ್ಟು ಗುಂಪಿಗೆ ಹಿಂದೆ ನಿಗದಿ ಪಡಿಸಿರುವ ವಿಶಾಸಲಾತಿಯ ಮೇಲೆ ಜನಸಂಖ್ಯೆಗೆ ಅನುಗುಣವಾಗಿ ೨೦ ರಂತೆ ವಿಶಾಸಲಾತಿ ಮತ್ತು ಇತರ ಸೌಲಭ್ಯಗಳನ್ನು ಹೆಚ್ಚಿಸಿ ಈ ಕೋಮುಗಳ ಶೈಕ್ಷಣಿಕ ಅಭಿವೃದ್ಧಿಗೆ ನೆರವಾಗಬೇಕಾಗಿ ಒತ್ತಾಯಿಸುತ್ತೇನೆ.

ಇಂದಿನ ಶಿಕ್ಷಣ ವರ್ಷದಲ್ಲಿ ಈ ಹೆಚ್ಚಿಸಿದ ವಿಶಾಸಲಾತಿ ಸೌಲಭ್ಯವನ್ನು ಬಿ. ಸಿ. ಟಿ. ಯಿಂದ ಇದ್ದು ಈಗ ಎಸ್.ಟಿ. ಯಲ್ಲಿ ಸೇರ್ಪಡೆಯಾಗಿರುವ ಕೋಮುಗಳ ವಿಶಾಸಲಾತಿ ಸೌಲಭ್ಯಗಳಿಂದ ಈ ಕೆಳಕಂಡಂತೆ ಅನ್ಯಾಯವಾಗಿದೆ. ಎಂದರೆ ಈ ವರ್ಷ ವೈದ್ಯಕೀಯ ಕಾಲೇಜುಗಳ ಒಟ್ಟು ೯೨೨ ಸ್ಥಾನಗಳಲ್ಲಿ ಬಿ.ಸಿ.ಟಿ. ಗೆ ಎಂದರೆ ಹಿಂದಿನ ಶೇಕಡ ೧೦ ರಂತೆ ಒಟ್ಟು ೯೨ ವಿಶಾಸಲಾತಿ ಸ್ಥಾನಗಳು ದೊರೆಯುತ್ತಿತ್ತು. ಇದರಿಂದ ೬೫ ಸ್ಥಾನಗಳು ದೊರೆಯುವಂತಾಗಿದೆ. ಅಲ್ಲದೆ ತಾಂತ್ರಿಕ ಕಾಲೇಜುಗಳಲ್ಲಿ ಒಟ್ಟು ೪೯೦೦ ಸ್ಥಾನಗಳಿದ್ದು ಬಿ.ಸಿ.ಟಿ. ಗೆ ಶೇಕಡ ೧೦ ರಂತೆ ೪೯೦ ವಿಶಾಸಲಾತಿ ಸ್ಥಾನಗಳು ದೊರೆಯು

ತ್ತಿದ್ದವು ಈಗ ಎಸ್.ಟಿ. ಆದ್ದರಿಂದ ಶೇಕಡ ೩ ರಂತೆ ಕೇವಲ ೧೪೭ ಮಾಸಲಾತಿ ಸ್ಥಾನಗಳು ದೊರೆತಿವೆ. ಇದರಿಂದ ಸುಮಾರು ೩೪೩ ಮಾಸಲಾತಿ ಸ್ಥಾನಗಳು ಅನ್ಯಾಯವಾಗಿದೆ. ಆದ್ದರಿಂದ ಈ ತಾರತಮ್ಯವನ್ನು ಸರಿಪಡಿಸಿ ಈಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತೇನೆ. ಸರ್ಕಾರ ಈ ಸದನದಲ್ಲಿ ಆಶ್ವಾಸನೆ ನೀಡಬೇಕಾಗಿ ಕೋರುತ್ತೇನೆ.

೩–೩೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲಕ್ಕಪ್ಪನವರು ಒಂದು ಮಹತ್ವದ ವಿಚಾರವನ್ನು ಎತ್ತಿದ್ದಾರೆ. ಎಸ್‌ಸಿಎಸ್‌ಟಿ ವಿಚಾರದಲ್ಲಿ ಕಾಡುಕುರುಬ, ನಾಯಕರು, ಎಲ್ಲರನ್ನೂ ಸೇರಿಸಿದ್ದೀರಿ. ಅವರಿಗೂ ಈ ಲಾಭ ಸಿಗಲಿ ಎಂದು ಹೇಳಿದ್ದಾರೆ. ಅವರು ಹೇಳಿರತಕ್ಕ ವಿಚಾರವನ್ನು ಪರಿಶೀಲಿಸುತ್ತಿದ್ದೇವೆ. ಜನಸಂಖ್ಯೆ ಆಧಾರದ ಮೇಲೆ ಅವರಿಗೆ ಸಿಗುತ್ತಿರಲಿಲ್ಲ. ಆದರಲ್ಲಿ ಇವರ ಹೊರತಾಗಿ ಬೇರೆ ಬೇರೆ ಜನಾಂಗದವರು ಇದ್ದಾರೆ. ಆ ಜನಾಂಗದವರ ಮನವಿಗಳ ಆಧಾರದ ಮೇಲೆ, ಒತ್ತಾಯದ ಆಧಾರದ ಮೇಲೆ ಕ್ರಮ ಕೈಗೊಂಡಿದ್ದೇವೆ. ಅವರು ಹೇಳಿದ ವಿಚಾರವನ್ನು ಪರಿಶೀಲಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಹಿಂದುಳಿದ ವರ್ಗಕ್ಕೆ ಯಾವ ಅನುಕೂಲವೂ ಆಗುತ್ತಿಲ್ಲ.

ಅಧ್ಯಕ್ಷರು.—ನಿಯಮ ೩೫೯ರಲ್ಲಿ ಮತ್ತೆ ವಿವರವನ್ನು ಕೇಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಅವರ ಹಿತಕ್ಕೆ ದಕ್ಕೆ ತರತಕ್ಕ ಪ್ರಯತ್ನವನ್ನು ಸರ್ಕಾರ ಮಾಡಿದೆ. ಸರ್ಕಾರಕ್ಕೆ ಅವರ ಬಗ್ಗೆ ಕಳಕಳಿ ಇದ್ದರೆ ಶೇಕಡ ೨೦ರಷ್ಟು ರಿಸರ್ವೇಷನ್ ಅನ್ನು ಬಿಸಿ. ಬಿಟಿ.ಯಂಪರಿಗೆ ಕೊಟ್ಟು ವಿದ್ಯಾಭ್ಯಾಸ ಸೌಲಭ್ಯ ಒದಗಿಸಿಕೊಡಲಿ. ಇದು ೯ ಲಕ್ಷ ಜನರ ಭವಿಷ್ಯದ ವಿಚಾರ. ಅವರನ್ನು ಇಷ್ಟು ನಿರ್ಲಕ್ಷ್ಯವಾಗಿ ನೋಡತಕ್ಕದ್ದು ಸರಿಯಲ್ಲ.

ಅಧ್ಯಕ್ಷರು.—ನೀವು ಕೂರುತ್ತೀರೋ ಇಲ್ಲವೋ ? ನೀವು ಹೇಳುವುದೇನೂ ಇಲ್ಲಿ ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅನ್ಯಾಯವಾಗಿದೆ ಎಂದು ಕೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಲೇಬೇಕಾಗುತ್ತದೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ;

"ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧೪ನೇ ನಿಯಮದ ಮೇರೆಗೆ ದಿನಾಂಕ ೨೬ನೇ ಆಗಸ್ಟ್ ೧೯೮೬ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

೧. ೧೯೮೬ನೇ ಇಸವಿಯ ಕರ್ನಾಟಕ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ,

೨. ೧೯೮೬ನೇ ಇಸವಿಯ ಕರ್ನಾಟಕ ನಗರಸಭೆಗಳ (ತಿದ್ದುಪಡಿ) ವಿಧೇಯಕ"

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧೪ನೇ ನಿಯಮದ ಮೇರೆಗೆ ದಿನಾಂಕ ೨೬ನೇ ಆಗಸ್ಟ್ ೧೯೮೬ರಂದು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕಾರವಾದ ಕರ್ನಾಟಕ ವೃತ್ತಿಪ್ರಾಯ ಉತ್ಪನ್ನಗಳ ಮಾರಾಟದ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, ೧೯೮೬ನ್ನು ಈ ಮೂಲಕ ಕಳುಹಿಸುತ್ತಿದ್ದೇನೆ."